ವಿಷಯತ್ಯಾಗ

✵ ಈ ಸಂಸಾರ ಒಂದು ಮುಳ್ಳುಗಿಡ. ಕೈ ಹಾಕಿತು ಅಂದರೆ ತರಚಿ ರಕ್ತಸುರಿಯ ಲಾರಂಭಿಸುತ್ತದೆ. ಒಂದು ಮುಳ್ಳುಗಿಡ ತೆಗೆದು ಕೊಂಡು ಬಂದು ಅದರ ಹತ್ತಿರ ಕುಳಿತು ಕೊಂಡು ಜಪಿಸು: 'ಈ ಗಿಡ ಸುಟ್ಟು ಹೋಯಿತು' ಎಂದು. ಅದಷ್ಟಕ್ಕೆ ಅದು ಸುಟ್ಟು ಹೋಗುತ್ತದೆಯೆ? ಜ್ಞಾನಾಗ್ನಿಯನ್ನು ಹೊತ್ತಿ ಸಿಕೊ. ಆ ಅಗ್ನಿಯಿಂದ ಅದನ್ನು ಸುಡು. ಆಗ ಮಾತ್ರವೇ ಅದು ಸುಟ್ಟು ಬೂದಿಯಾಗುತ್ತದೆ.

✵ ಸಾಧನೆಯ ಸಮಯದಲ್ಲಿ ಸ್ವಲ್ಪ ಹೆಚ್ಚು ಶ್ರಮ ತೆಗೆದುಕೊಳ್ಳಬೇಕು. ಆ ಬಳಿಕ ರಾಜರಸ್ತೆ. ನದಿ ಡೊಂಕಾಗಿ ಹರಿಯುವ ಜಾಗದಲ್ಲಿ ಸ್ವಲ್ಪ ಶ್ರಮ ತೆಗೆದುಕೊಂಡು ಮುಂದು ವರಿದು, ಬಳಿಕ ಅನುಕೂಲವಾದ ಗಾಳಿ ದೊರೆತಾಗ ದೋಣಿ ಯನ್ನು ಸುಮ್ಮನೆ ತೇಲಿಬಿಡು.

✵ ಎಲ್ಲಿಯವರೆಗೆ ನೀನು ಮಾಯೆಯ ಮನೆಯೊಳಗೆ ಇರುವೆಯೊ, ಎಲ್ಲಿಯವರೆಗೆ ಮಾಯೆಯ ಮೋಡ ಮೇಲೆ ಕವಿದುಕೊಂಡಿರುತ್ತದೆಯೋ, ಅಲ್ಲಿಯವರೆಗೆ ಜ್ಞಾನ ಸೂರ್ಯನ ಪ್ರಭಾವ ಗೊತ್ತಾಗದು. ಮಾಯೆಯ ಗೃಹವನ್ನು ತ್ಯಜಿಸಿ (ಕಾಮ ಕಾಂಚನ ತ್ಯಜಿಸಿ) ಹೊರಗಡೆ ಬಂದು ನಿಂತುಕೊಂಡರೆ ಆಗ ಜ್ಞಾನಸೂರ್ಯ ಅವಿದ್ಯೆಯನ್ನು ನಾಶ ಮಾಡುತ್ತಾನೆ. ಮನೆಯ ಒಳಗೆ ನಿಂತರೆ ಲೆನ್ಸು ಕಾಗದವನ್ನು ಸುಡಲಾರದು. ಮನೆಯಿಂದ ಹೊರಗೆ ಬಂದು ನಿಂತರೆ ಬಿಸಿಲು ಲೆನ್ಸಿನ ಮೇಲೆ ಬೀಳುತ್ತದೆ, — ಆಗ ಕಾಗದ ಸುಟ್ಟುಹೋಗುತ್ತದೆ. ಮತ್ತೆ ಆಕಾಶ ಮೋಡದಿಂದ ಕೂಡಿದ್ದರೆ ಲೆನ್ಸು ಕಾಗದವನ್ನು ಸುಡಲಾರದು. ಮೇಘ ಚದುರಿ ಹೋದರೆ ಆಗ ಅದು ಸುಟ್ಟುಹೋಗುತ್ತದೆ.

✵ ಕಾಮಕಾಂಚನದ ಮನೆಯನ್ನು ಬಿಟ್ಟು ಸ್ವಲ್ಪ ಹೊರಗೆ ನಿಂತರೆ — ಹೊರಗೆ ನಿಂತು ಸ್ವಲ್ಪ ಸಾಧನೆ ತಪಸ್ಸುಮಾಡಿದರೆ, ಆಗ ಮನಸ್ಸಿನ ಅಂಧಕಾರ ನಾಶವಾಗುತ್ತದೆ, ಅಹಂಕಾರವೆಂಬ ಅವಿದ್ಯಾ ಮೋಡ ಸುಟ್ಟು ಭಸ್ಮವಾಗುತ್ತದೆ; ಜ್ಞಾನ ಪ್ರಾಪ್ತಿಯಾಗು ತ್ತದೆ. ಕಾಮಕಾಂಚನವೇ ಆ ಮೋಡ.

✵ ಎಲ್ಲಿಯವರೆಗೆ ವಿಷಯಾಸಕ್ತಿ ಇರುವುದೊ, ಕಾಮ ಕಾಂಚನದ ಮೇಲೆ ಪ್ರೀತಿ ಇರುವುದೊ, ಅಲ್ಲಿಯವರೆಗೆ ದೇಹ ಬುದ್ಧಿ ಹೋಗದು. ವಿಷಯಾಸಕ್ತಿ ಎಷ್ಟೆಷ್ಟು ಮಟ್ಟಿಗೆ ಕಡಿಮೆ ಯಾಗುವುದೊ ಅಷ್ಟಷ್ಟು ಮಟ್ಟಿಗೆ ಆತ್ಮಜ್ಞಾನದ ಕಡೆ ಮುಂದು ವರಿಯಬಹುದು; ದೇಹಬುದ್ಧಿ ಕೂಡ ಕಡಿಮೆಯಾಗುತ್ತದೆ. ವಿಷಯಾಸಕ್ತಿ ಬೇರುಸಹಿತ ಹೊರಟು ಹೋದರೆ ಆತ್ಮಜ್ಞಾನ ದೊರಕುತ್ತದೆ. ಆಗ, ಆತ್ಮ ಬೇರೆ ದೇಹ ಬೇರೆ ಎಂಬ ಬೋಧೆ ಯಾಗುತ್ತದೆ.

✵ ಕಾಮಕಾಂಚನಾಸಕ್ತಿ ಮನಸ್ಸಿನಿಂದ ತೊಲಗಿಹೋದರೆ, ಭಗವಂತನ ಕಡೆ ಮನಸ್ಸು ಹರಿಯುತ್ತದೆ. ಅಲ್ಲಿಗೆ ಹೋಗಿ ಆತನಲ್ಲಿ ಲೀನ ವಾಗಿಬಿಡುತ್ತದೆ. ಯಾರು ಬದ್ಧನೋ ಆತನೇ ಮುಕ್ತನಾಗಬಲ್ಲ. ಭಗವಂತನಿಗೆ ವಿಮುಖ ನಾದೊಡನೆಯೇ ಬದ್ಧನಾಗಿ ಬಿಡುತ್ತಾನೆ — ತಕ್ಕಡಿಯ ಕೆಳಗಿನ ಮುಳ್ಳು ಮೇಲಿನ ಮುಳ್ಳಿ ನಿಂದ ಬೇರೆಯಾಗಿ ಯಾವಾಗ ನಿಲ್ಲುತ್ತದೆ? ಯಾವಾಗ ತಕ್ಕಡಿಯ ಒಂದು ತಟ್ಟೆಯಲ್ಲಿ ಕಾಮಕಾಂಚನದ ಭಾರ ಅಧಿಕವಾಗುವುದೋ ಆಗ.

✵ ಸಂಸಾರಾಸಕ್ತಿಯನ್ನು ನಿರ್ಮೂಲಮಾಡುವುದಕ್ಕೆ ಸಾಧನೆ ಭಜನೆಯನ್ನು ಮಾಡುವುದು. ಭಗವಂತನ ಚಿಂತನೆ ಹೆಚ್ಚು ಹೆಚ್ಚಿದಂತೆಲ್ಲ ಸಂಸಾರದ ಸಾಮಾನ್ಯ ವಸ್ತುಗಳ ಭೋಗಾಸಕ್ತಿ ಕಡಿಮೆ ಕಡಿಮೆಯಾಗುತ್ತಾ ಬರುತ್ತದೆ. ಆತನ ಪಾದಪದ್ಮಗಳ ಕಡೆ ಭಕ್ತಿ ಎಷ್ಟು ಪ್ರಮಾಣದಲ್ಲಿ ಬೆಳೆಯುವುದೊ ಅಷ್ಟೇ ಪ್ರಮಾಣದಲ್ಲಿ ವಿಷಯಾಸಕ್ತಿ ಕಡಿಮೆ ಕಡಿಮೆಯಾಗುತ್ತಾ ಬರು ತ್ತದೆ. ಅಷ್ಟೇ ಪ್ರಮಾಣದಲ್ಲಿ ದೇಹಸುಖದ ಕಡೆ ಹಾತೊರೆಯು ವುದು ಕಡಿಮೆಕಡಿಮೆಯಾಗುತ್ತಾ ಬರುತ್ತದೆ. ಪರಸ್ತ್ರೀ ತಾಯಿಯೇ ಎಂಬ ಬೋಧೆಯಾಗುತ್ತದೆ. ಸ್ವಪತ್ನಿ ಅಧ್ಯಾತ್ಮ ಜೀವನದ ಸಹಾ ಯಕಿ ಎಂಬ ಬೋಧೆಯಾಗುತ್ತದೆ. ಪಶು ಪ್ರವೃತ್ತಿ ಹೊರಟು ಹೋಗುತ್ತದೆ. ದೇವಭಾವ ಬಂದುಬಿಡುತ್ತದೆ. ಸಂಸಾರಾಸಕ್ತಿ ಒಮ್ಮೆಗೆಯೆ ಬಿಟ್ಟು ತೊಲಗಿ ಹೋಗುತ್ತದೆ. ಆಗ ನೀನು ಸಂಸಾರ ದಲ್ಲಿ ಇದ್ದರೂ ಜೀವನ್ಮುಕ್ತನಾಗಿ ಓಡಾಡಿಕೊಂಡು ಇರುತ್ತೀಯೆ.

✵ ಜ್ಞಾನ ಪಡೆದುಕೊಂಡ ಮೇಲೆ ಬೇರೆ ಲೋಕಕ್ಕೆ ಹೋಗ ಬೇಕಾಗಿಲ್ಲ. ಪುನರ್ಜನ್ಮ ಉಂಟಾಗುವುದಿಲ್ಲ. ಆದರೆ ಎಲ್ಲಿಯ ವರೆಗೆ ಜ್ಞಾನವನ್ನು ಪಡೆದುಕೊಂಡಿಲ್ಲವೊ, ಭಗವಂತನ ಸಾಕ್ಷಾ ತ್ಕಾರವನ್ನು ಪಡೆದುಕೊಂಡಿಲ್ಲವೊ, ಅಲ್ಲಿಯವರೆಗೆ ಮತ್ತೆ ಜನ್ಮ ವೆತ್ತಬೇಕಾಗುತ್ತದೆ. ಅದರಿಂದ ಬಿಡುಗಡೆ ಎಂಬುದು ಇಲ್ಲವೇ ಇಲ್ಲ. ಅದುವರೆಗೆ ಪರಲೋಕ ಎಂಬುದು ಇದ್ದೇ ಇದೆ. ಜ್ಞಾನ ದೊರೆತರೆ, ಭಗವಂತನ ದರ್ಶನ ದೊರೆತರೆ, ಮುಕ್ತಿ ದೊರೆತು ಬಿಡುತ್ತದೆ — ಬಳಿಕ ಪುನರ್ಜನ್ಮವಿಲ್ಲ. ಬೇಯಿಸಿದ ಬತ್ತವನ್ನು ಬಿತ್ತಿದರೆ ಅದು ಮೊಳೆಯದು. ಯಾರಾದರೂ ಜ್ಞಾನಾಗ್ನಿಯಲ್ಲಿ ಬೆಂದುಹೋಗಿಬಿಟ್ಟಿರುವುದಾದರೆ ಅವರಿಂದ ಸೃಷ್ಟಿಯ ಯಾವ ಕಾರ್ಯವೂ ನಡೆಯದು. ಅವರ ಕೈಯಲ್ಲಿ ಸಂಸಾರಕಾರ್ಯ ಸಾಧ್ಯವಿಲ್ಲ; ಅವರಿಗೆ ಕಾಮ ಕಾಂಚನದಲ್ಲಿ ಆಸಕ್ತಿಯೂ ಇರದು.

ಶ್ರೀರಾಮಕೃಷ್ಣ ವಚನವೇದದಿಂದ